## ಸಿವಿಲ್ ಜಡ್ಜ್ ಹಾಗೂ ಪ್ರ.ದ.ನ್ಯಾ.ದಃ ನ್ಯಾಯಾಲಯಃ ಶೃಂಗೇರಿ

## ಸಿ.ಸಿ ಸಂಖ್ಯೆ ::270/2022

| | | | |
|---|---|---|---|
| **ಸಾಕ್ಷಿದಾರರ ಹೆಸರು** | : | ಪ್ರಸನ್ನ | **PW**-09 |
| **ತಂದೆಯ ಹೆಸರು** | : | ಸುಂದರ್ ಹೆಗ್ಡೆ | **CW**-07 |
| **ವಯಸ್ಸು** | : | 60 ವರ್ಷ | |
| **ಉದ್ಯೋಗ** | : | ವ್ಯವಸಾಯ | |
| **ವಾಸಸ್ಥಳ** | : | ಮೌಳಿ, ಮೆಣಸೆ ಗ್ರಾ. ಪಂ. | |

**ದಿನಾಂಕಃ07-03-2026 ರಂದು ಪ್ರಮಾಣವಚನ ಬೋಧಿಸಲಾಯಿತು.**

**:: ಮುಖ್ಯ ವಿಚಾರಣೆ :: A.P.P ರವರಿಂದ ::**

1. ನನಗೆ ಈ ಪ್ರಕರಣದಲ್ಲಿ ಯಾವುದೇ ವಿಚಾರ ತಿಳಿದಿರುವುದಿಲ್ಲ. ನಾನು ಈ ಪ್ರಕರಣದಲ್ಲಿ ಪೋಲೀಸರಿಗೆ ಯಾವುದೇ ಹೇಳಿಕೆ ಮತ್ತು ಮುಂದುವರಿದ ಹೇಳಿಕೆಯನ್ನು ನೀಡಿರುವುದಿಲ್ಲ. ಸಾಕ್ಷಿಗೆ ಮೂಲ ಸಿ.ಸಿ.ನಂ.238/2018 ರಲ್ಲಿ ಈಗಾಗಲೇ ನಿಶಾನೆಗೊಂಡಿರುವ ನಿಪಿ-7 ರಲ್ಲಿ ಇರುವ ಸಹಿಯನ್ನು ತೋರಿಸಲಾಗಿ ಸಾಕ್ಷಿಯು ಸದರಿ ಸಹಿಯನ್ನು ನೋಡಿ ಒಪ್ಪಿದ್ದು ಅದು ಈಗಾಗಲೇ ನಿಪಿ-7(ಸಿ) ಎಂದು ನಿಶಾನೆಗೊಂಡಿರುತ್ತದೆ. ಸಾಕ್ಷಿಯು ಮುಂದುವರಿದು, ಸದರಿ ಸಹಿಯನ್ನು ಪೋಲೀಸರು ಹೇಳಿದ್ದರಿಂದ ಮಾಡಿದೆ, ಸದರಿ ದಾಖಲೆಯನ್ನು ಏನು ವಿಚಾರ ಬರೆದಿದೆ ಎಂದು ತಿಳಿದಿರುವುದಿಲ್ಲ ಎಂದು ನುಡಿಯುತ್ತಾರೆ.

(ಈ ಹಂತದಲ್ಲಿ ಎ.ಪಿ.ಪಿ. ಯವರು ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರುತ್ತಾರೆ ಅಂತೆಯೇ ಪರಿಗಣಿಸಿ ಅನುಮತಿ ನೀಡಲಾಯಿತು).

**::ಪಾಟೀಸವಾಲು :: A.P.P ರವರಿಂದ ::**

ದಿಃ 08-04-2018 ರಂದು ಶೃಂಗೇರಿ ಪೋಲೀಸ್ ಠಾಣೆಯಲ್ಲಿ ನನ್ನ ಹಾಗೂ ಚಾಸಾ-6 ಮತ್ತು ಚಾಸಾ-7 ರವರ ಸಮಕ್ಷಮ ನಾನು ಗುರುತಿಸಿದ ಪ್ರಕರಣದಲ್ಲಿ ಕಳುವಾಗಿದೆ ಎಂದು ಹೇಳಲಾದ 24 ಇಂಚಿನ ಎಲ್.ಜಿ., ಎಲ್.ಇ.ಡಿ ಟಿವಿಯನ್ನು ಬೆಳಗ್ಗೆ 9.00 ರಿಂದ 9.30 ರ ವರೆವಿಗೂ ಅಮಾನತು ಮಾಡಿಕೊಂಡರು ಎಂದರೆ ನನಗೆ ಗೊತ್ತಿಲ್ಲ. ಸದರಿ ಅಮಾನತು ಪಕ್ರಿಯೆ ಮತ್ತು ಪಂಚನಾಮೆಯನ್ನು ಶೃಂಗೇರಿ ಪೋಲೀಸ್ ಠಾಣೆಯಲ್ಲಿ ದಾಖಲಿಸಿಕೊಂಡರು ಎಂದರೆ ನನಗೆ ಗೊತ್ತಿಲ್ಲ. ದಿಃ 04-04-2018 ರಂದು ಶೃಂಗೇರಿ ಪೋಲೀಸರು ನನ್ನ ಹೇಳಿಕೆಯನ್ನು ಮತ್ತು ದಿಃ08-04-2018 ರಂದು ನನ್ನ ಮುಂದುವರಿದ ಹೇಳಿಕೆಯನ್ನು ದಾಖಲು ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ.

**:: ಪಾಟೀ ಸವಾಲು :: ಆರೋಪಿ ಪರ ಶ್ರೀ.K.C.C ವಕೀಲರಿಂದ ::ಇಲ್ಲ::**

**:: ಮರುವಿಚಾರಣೆ ಇಲ್ಲ ::**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

ಸಹಿ::

ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.,

ಶೃಂಗೇರಿ.